IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಗ್ರಾಮೀಣ ಅಸ್ಮಿತೆ; ಕಿರಗೂರಿನ ಗಯ್ಯಾಳಿಗಳು

ಅರುಣ್ ಕುಮಾರ್
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಭಾರತಿ, ಕುವೆಂಪು ವಿಶ್ವ ವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಥಾ ಸಾಹಿತ್ಯ ಬಹು ವಿಶಿಷ್ಟವಾದದ್ದು. ಕಥೆ ಹೇಳುವ ಪರಿಪಾಠ ಇಂದು ನಿನ್ನೆದಲ್ಲ. ಕನ್ನಡ ಸಾಹಿತ್ಯದ ಆರಂಭದ ಕಾಲದಿಂದಲೂ ಕೂಡ ಈ ಪ್ರಕಾರವನ್ನು ಅನೇಕ ಕವಿಗಳು ತಮ್ಮ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ. ಕನ್ನಡದ ಮೊಟ್ಟ ಮೊದಲ ಗದ್ಯ ಕೃತಿ ವಡ್ಡಾರಾಧನೆಯಿಂದ ಆದಿಯಾಗಿ ಹೊಸಗನ್ನಡ ಸಾಹಿತ್ಯದ ಪರಂಪರೆಯಲ್ಲಿ ಅದು ವಿಶಿಷ್ಟವಾಗಿ ಬೆಳೆದು ಉಜ್ವಲತೆಯನ್ನು ಪಡೆದುಕೊಂಡಿರುವಂತದ್ದು. ಇದನ್ನ ಅನೇಕ ಲೇಖಕರು ವಿಭಿನ್ನ ಆಯಾಮಗಳಲ್ಲಿ, ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇಂತಹ ಕಥಾ ಸಾಹಿತ್ಯಕ್ಕೆ ವೈಶಿಷ್ಟ್ಯವನ್ನು ನೀಡಿದವರು, ಕನ್ನಡದ ಶ್ರೇಷ್ಠ ಕವಿ, ಲೇಖಕ, ಕಾದಂಬರಿಕಾರ, ಪೂರ್ಣಚಂದ್ರ ತೇಜಸ್ವಿಯವರು. ಇವರು ಕಥೆಯನ್ನ ಕಟ್ಟುವುದಕ್ಕಿಂತ ಕಥೆಯನ್ನ ಸೃಷ್ಟಿಸುವ ಮಾದರಿಯನ್ನು ಕಂಡುಕೊಂಡವರು. ಅಂತಹ ಅವರ ವಿಷ್ಟವಾದ ಬರಹಗಳಲ್ಲಿ ಕಿರಗೂರಿನ ಗಯ್ಯಾಳಿಗಳು ಕಥಾ ಸಂಕಲನವೂ ಒಂದು.

ಸಹ್ಯಾದ್ರಿ ಪರ್ವತ ಶ್ರೇಣಿಯ ಕುಗ್ರಾಮವೊಂದರ ವನಿತೆಯರ ಚಿತ್ರಣವನ್ನು ಈ ಕಥೆ ತೆರೆದಿಡುತ್ತದೆ. ಕಥೆಯ ಪ್ರಾರಂಭವೇ ಹೆಂಗಸರ ನೆಪದಿಂದ ಕಿರಗೂರು ಪ್ರಸಿದ್ಧವಾಗಿರುವುದನ್ನು ಹೇಳುತ್ತದೆ. ಎಲ್ಲಿ ಗಂಡಸರು ಎಷ್ಟು ಸೌಮ್ಯರೋ, ಹೆಂಗಸರೂ ಅಷ್ಟೇ ಬಜಾರಿಯರು ಎಂಬುದು ಕಥೆಯ ಉದ್ದಕ್ಕೂ ಸ್ಥಿರವಾಗುತ್ತಾ ಹೋಗುತ್ತದೆ. "ತಮ್ಮ ಆತ್ಮ ಗೌರವಕ್ಕಾಗಿ ಅವಿರತ ಹೋರಾಡುತ್ತಿರುವ ಎಲ್ಲಾ ಮಹಿಳೆಯರಿಗೆ" ತೇಜಸ್ವಿಯವರು ಈ ಕೃತಿಯನ್ನು ಅರ್ಪಿಸಿದ್ದಾರೆ. ಆತ್ಮ ಗೌರವದ ಬಗೆಗಿನ ಪರಿಕಲ್ಪನೆ ಸ್ತ್ರೀಯರಲ್ಲಿ ಇತ್ತು ದಾನಮ್ಮ ಇಡೀ ವ್ಯವಸ್ಥೆಯಲ್ಲಿ ಹೊಸ ತಲ್ಲಣವನ್ನು ಎದುರಿಸಲು ತಾನು ಮಾತ್ರ ಸಜ್ಜಾಗದೆ ಕಿರಗೂರಿನ ಮೌಢ್ಯತೆಗೆ ಸಿಲುಕಿದ್ದ ಎಲ್ಲ ಜಾತಿ ವರ್ಗದ ಮಹಿಳೆಯರನ್ನು ಎಚ್ಚರಿಸುತ್ತ ಹೋರಾಟಕ್ಕೆ ಇಳಿಯುವಂತೆ ಮಾಡುತ್ತಾಳೆ ಎಂಬುದನ್ನು ಈ ಕೃತಿ ತಿಳಿಸುತ್ತದೆ.

"ನಾವು ಹುಟ್ಟಿದಲಗಾಯ್ತಿಂದ ಇಂಥ ಗಾಳಿ ನೋಡಿರಲಿಲ್ಲ ಎಂತೆಂಥ ಮಳೆ ಗಾಳಿ ಕಂಡಿದ್ದೇನೆ ಇಂಥ ಗಾಳಿ ನೋಡಿದ್ದು ಮಾತ್ರ ನೆನಪಿಲ್ಲ"[1] ಕಥೆಯಲ್ಲಿನ ಗಯ್ಯಾಳಿಗಳ ಸ್ವಭಾವದಂತೆ ನಿಸರ್ಗವು ಕೆಲವೊಮ್ಮೆ ಕಠಿಣ, ಕೆಲವೊಮ್ಮೆ ಮೃದು ಮಳೆ ಬಿಸಿಲು ವಾತಾವರಣ ಎಲ್ಲವೂ ಮಾನವನ ಭಾವನೆಗಳಿಗೆ ಪ್ರತಿಧ್ವನಿಯಂತೆ ಕಾಣಿಸುತ್ತವೆ. ಇಲ್ಲಿ ನಿಸರ್ಗದ ಸುಂದರತೆ ಮಾತ್ರವಲ್ಲ ಅದರ ಕಠಿಣ ಮುಖವು ಇದೆ. ಇದು ಕಥೆಯ ವಾಸ್ತವತೆಯನ್ನು ಗಟ್ಟಿಗೊಳಿಸುತ್ತದೆ. ಪ್ರಕೃತಿಗೆ ವಿರುದ್ಧವಾದ ಮನುಷ್ಯನ ವರ್ತನೆಗೆ ಪ್ರಕೃತಿ ಸಹಜವಾಗಿ ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಕೊಡುವ ಉತ್ತರ ಇದಾಗಿದೆ. ಇಂಥ ಗಾಳಿ ಮಳೆಗಳು ಪ್ರಕೃತಿಯ ವಿರುದ್ಧ ಮನುಷ್ಯ ಪ್ರಭುತ್ವ ಸ್ಥಾಪಿಸಲು ಹೋದರೆ ಇಡೀ ಮನುಕುಲ, ಜೀವನ ಸಂಕುಲ ಅದೋಗತಿಗೆ ಹೋಗುತ್ತದೆ ಎಂಬುದು ಸ್ಪಷ್ಟ.

"ಹೆಬ್ಬಲಸಿನ ಮರ ಗಾಳಿ ಮಳೆಗೆ ಬಿದ್ದು ಬುಡ ಸಮೇತ ದಾನಮ್ಮನ ಮನೆಯ ಪಾಯವನ್ನು ಅಲ್ಲಾಡಿಸುವ ಸಂದರ್ಭಕ್ಕೆ ದಾನಮ್ಮನ ಅಭಿವ್ಯಕ್ತಿಯ ಮಾತುಗಳು ಮರದ ಮರ್ಮಕ್ಕೆ ನಾಟವಂತೆ ವ್ಯಕ್ತಪಡಿಸುತ್ತಾಳೆ. ಅದು ನೇರವಾಗಿ ಇನ್ನೂ ಬೀಳದೆ ನಿಂತಿರುವ ಮರಕ್ಕೆ, ಅದನ್ನು ಕಡಿಸದೇ ಇರುವ ಗಂಡನಿಗೆ, ಅದರ ಬೇರಿನ ಮೇಲೆ ಮನೆ ಕಟ್ಟಿರುವ ಮಾವನಿಗೆ, ಗಾಳಿಗೆ ಹೆದರಿ ಮುದ್ದೆಯಾಗಿ ಕುಳಿತಿರುವ ಊರ ಜನರಿಗೆ ಹೀಗೆ ಎಲ್ಲರನ್ನೂ ಕಲಾತ್ಮಕವಾಗಿ ಸಂಯೋಜಿಸಿ ಭಾವಗೀತೆಯಂತೆ ಜಾಡಿಸಿ ಉಗಿದಳು"[2]

ಮಾನವನ ಸಂಘರ್ಷಗಳು ಜಗಳಗಳು ನಡೆಯುತ್ತಿದ್ದರೂ ನಿಸರ್ಗ ತನ್ನ ನಿಯಮದಲ್ಲೇ ಸಾಗುತ್ತದೆ. ಇದರಿಂದ ಮಾನವ ಜೀವನದ ಕ್ಷುದ್ರತೆಯು ನಿಸರ್ಗದ ವೈಶಾಲ್ಯವು ಸ್ಪಷ್ಟವಾಗುವುದರ ಜೊತೆಗೆ ಹೆಣ್ಣು ಲಿಂಗ ರಾಜಕಾರಣದ ಒಳಗೆ ನಲುಗಿ ಹೋಗಿರುವ ಸಂದರ್ಭದಲ್ಲಿ ಭಾರತೀಯ ಮಹಿಳೆ ತೇಜಸ್ವಿಯವರ ಕೃತಿಗಳಲ್ಲಿ ತೋರುವ ದಿಟ್ಟತೆ, ನೇರ ಮಾತುಗಳು, ಆಕೆಯ ಅಭಿವ್ಯಕ್ತಿ ಸ್ವಾತಂತ್ರ್ಯ ದಾನಮ್ಮನ ಮಾತುಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ದಾನಮ್ಮ ಕೆಟ್ಟವಳಲ್ಲ. ಅಮಾವಾಸ್ಯೆಗೋ ಹುಣ್ಣಿಮೆಗೋ ಕೋಪವನ್ನು ವ್ಯಕ್ತಪಡಿಸುವುದನ್ನು ಕಾಣುತ್ತೇವೆ. ತನ್ನ ಇಡೀ ಅಸ್ತಿತ್ವವೇ ನಾಶವಾಗುವ ಸಂದರ್ಭದಲ್ಲಿ ಹೆಣ್ಣು ಎಲ್ಲವನ್ನು ನೋಡಿ ಸಹಿಸಿಕೊಂಡು ಸುಮ್ಮನೆ ಕೂರುವವಳಲ್ಲ. ಇಲ್ಲಿ ಗ್ರಾಮೀಣ ಬದುಕಿನ ಮಹಿಳಾ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ದಾನಮ್ಮನ ಪಾತ್ರ ಪ್ರತಿನಿಧಿಸುವಂತಿದೆ. 'ಆ ಗಯ್ಯಾಳಿ ಬಾಯಿಗೆ ಮಳೆ ಗಾಳಿ ಸುತಾ ಹೆದರುತ್ತದೆ ಅಂತಾಯ್ತು' ಮಾತಿಗೂ ಶಕ್ತಿ ಇದೆ ಎಂದು ಹೇಳುವ ತೇಜಸ್ವಿ, ಹೇಳಬೇಕಾದುದ್ದನ್ನು ಹೇಳಲೇಬೇಕು. ಅದು ಹೆಣ್ಣಾಗಲಿ ಗಂಡಾಗಲಿ ಅಭಿವ್ಯಕ್ತಿ ತುಂಬಾ ಮುಖ್ಯವಾದದ್ದು ಎನ್ನುತ್ತಾರೆ.

"ಕಿರಗೂರಿನ ಹೆಂಗಸರೆಲ್ಲಾ ಕೇವಲ ಗಂಡಸರ ಸಮಾಧಾನಕ್ಕೆ ಅವಳು ಗಯ್ಯಾಳಿ ಎಂದು ಮೇಲೆ ದೂಷಿಸಿದರೂ ಒಳಗೇ ಅವಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಳ್ಳ ತೊಡಗಿದರು. ಗಂಡಸರ ಮರ್ಜಿಗೆ ತಕ್ಕಂತೆ ಕುಣಿಯಲು ಅವರು ಯಾರೂ ತಯ್ಯಾರಿರಲಿಲ್ಲ."[3] ಕಿರುಗೂರಿನ ಗಯ್ಯಾಳಿಗಳು ಕೃತಿಯ ಕೇಂದ್ರ ಬಿಂದುಗಳೇ ಮಹಿಳೆಯರು. ದಾನಮ್ಮನ ನೇತೃತ್ವದ ಮಹಿಳಾ ಗುಂಪು ಕೇವಲ ಗಯ್ಯಾಳಿಗಳ ಗುಂಪಲ್ಲ, ಅದು ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಶಕ್ತಿ ಇರುವ ಸ್ತ್ರೀ ಗುಂಪು. ಕಿರುಗೂರಿನ ಗಂಡಸರೆಲ್ಲರೂ ಮಧ್ಯಪಾನ, ಜೂಜು, ಸೋಮಾರಿಗಳಾಗಿ ಇವುಗಳಲ್ಲೇ ಮುಳುಗಿ ಹೋಗಿರುವಾಗ ಮಹಿಳೆಯರು ಸಂಘಟಿತರಾಗಿ ಕಿರಗೂರಿನ ಗೌರವವನ್ನು ಕಾಪಾಡಲು ಹೋರಾಡುತ್ತಾರೆ. ಅವರಲ್ಲಿನ ಧೈರ್ಯ, ಚತುರತೆ, ತೀಕ್ಷ್ಣ ಮಾತುಗಾರಿಕೆ ಇಲ್ಲಿ ವ್ಯಕ್ತವಾಗಿದೆ. ಇಲ್ಲಿ ಅವರು ಬಳಸುವ ಪದಗಳು ಅವರ ಬೈಗುಳಗಳು ಹಳ್ಳಿಯ ಹರಟೆಯಲ್ಲಿಯೇ ಮುಳುಗಿ ಹೋದ ಗಂಡಸರ ಅಸಹಾಯಕತೆ ವಿರುದ್ಧದ ಧ್ವನಿ. ಇವೆಲ್ಲವೂ ಭಾಷೆಯ ವಿಭಿನ್ನ ಸ್ತರಗಳನ್ನು ಪ್ರತಿನಿಧಿಸುತ್ತಾ ಬೈಗುಳ ಎಂಬುದು ಕೇವಲ ನಿಂದನೆಯಲ್ಲ. ಅದು ತನ್ನೊಳಗಿನ ಸಿಟ್ಟನ್ನು ಹೊರ ಹಾಕುವ ಅಸ್ತ್ರ ಹಾಗೂ ಶೋಷಣೆಯನ್ನು ಪ್ರತಿಭಟಿಸುವ ಆಯುಧವು ಹೌದು.

ದಾನಮ್ಮನಂತಹ ಪಾತ್ರಗಳಲ್ಲಿನ ಅವಳ ಮಾತುಗಾರಿಕೆ ಮತ್ತು ಧೈರ್ಯ ಹಳ್ಳಿಯಲ್ಲಿ ಇರುವಂತಹ ಮಹಿಳೆಯರಿಗೆ ಹೊಸ ನೈತಿಕ ಅಧಿಕಾರವನ್ನು ಸೃಷ್ಟಿಸುತ್ತದೆ. ಸಮಾಜವು ಯಾವುದನ್ನು ಗಯ್ಯಾಳಿತನವೆಂದು ಹೀಯಾಳಿಸುತ್ತದೆಯೋ ಅದನ್ನೇ ಈ ಮಹಿಳೆಯರು ಅಧಿಕಾರ ಶಾಹಿಯ ವಿರುದ್ಧದ ಅಸ್ತ್ರವನ್ನಾಗಿ ಬಳಸುತ್ತಾರೆ. ಕೃತಕ ಅಧಿಕಾರಕ್ಕಿಂತ ಸಹಜ ಅಧಿಕಾರಕ್ಕೆ ಹೆಚ್ಚಿನ ಶಕ್ತಿ ಇದೆ ಎಂಬುದನ್ನು ಈ ಕೃತಿಯಲ್ಲಿ ತೇಜಸ್ವಿಯವರು ತಿಳಿಸಿಕೊಟ್ಟಿದ್ದಾರೆ.

ಕಿರಗೂರಿ ಗಯ್ಯಾಳಿಗಳು ಕಥೆಯಲ್ಲಿ ಎಲ್ಲಾ ತರಹದ ಸಮಾಜದ ಸಮಾನತೆಯನ್ನು ಕಾಪಾಡುವ ಉದ್ಯೋಗಸ್ಥ ವರ್ಗಗಳನ್ನು ಸರಿಸಮಾನವಾಗಿ ಚಿತ್ರಿಸಿರುವ ರೀತಿ ಅನನ್ಯ. ಇಲ್ಲಿ ಕೃಷಿಕರಿದ್ದಾರೆ, ಮರ ಕೊಯ್ಯುವ ಸ್ಟೋನ್ ಬಡಗಿಗಳಿದ್ದಾರೆ, ಹರಿಜನ ಮಾರಸಿದ್ದ ಇದ್ದಾರೆ, ಗ್ರಾಮ ಸೇವಕ ಶಂಕ್ರಪ್ಪ, ಪೊಲೀಸ್ ಅಧಿಕಾರಿಗಳು, ನಂಬೂದರಿ ಪಂಡಿತ ಹೀಗೆ ಒಂದು ಸಮಾಜಕ್ಕೆ ಬೇಕಾದ ಎಲ್ಲ ಕಸುಬುಗಳು ಒಂದಕ್ಕೊಂದು ಪೂರಕವಾಗಿ ವಾಸವಾಗಿರುವುದು ಭಾರತೀಯ ಬಹು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. 'ಆ ಊರುಗಳ ಹರಿಜನರು ಬಿಲ್ಲವರು ಒಕ್ಕಲಿಗರು ಎಲ್ಲರೂ ರೂಪದಲ್ಲಾಗಲಿ ನಡವಳಿಕೆಯಲ್ಲಾಗಲಿ ಒಂದೇ ತರ' ಎನ್ನುವ ತೇಜಸ್ವಿ, ಊರಿನಲ್ಲಿರುವ ವಿವಿಧ ವರ್ಗಗಳು ಪುರುಷ–ಸ್ತ್ರೀ, ಹಿರಿಯ–ಕಿರಿಯ ಪ್ರಭಾವಶಾಲಿ–ಅಂಚಿನವರು ಎಲ್ಲರ ದೃಷ್ಟಿಕೋನಗಳು ಕಥೆಯಲ್ಲಿ ಸಮಾನವಾಗಿ ಕಂಡುಬರುತ್ತವೆ. ಒಂದೇ ಸಾಮಾಜಿಕ ಸತ್ಯವಿಲ್ಲ. ಪ್ರತಿಯೊಬ್ಬನಿಗೂ ತನ್ನದೇ ಸತ್ಯವಿದೆ ಎಂಬುದನ್ನು ನಿರೂಪಿಸಿದೆ. ಜಾತಿ ಆಳುವ ಭಾರತ ದೇಶದಲ್ಲಿ ಮನುಷ್ಯನಿಗೆ ಇಲ್ಲದೆ ಇರುವ ವ್ಯತ್ಯಾಸಗಳ ಬಗ್ಗೆ ಚರ್ಚಿಸುತ್ತಾ ಪಂಪ ಕವಿಯ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಮಾತನ್ನು ಜಾತಿ ಬಹುತ್ವದ ನೆಲೆಯಲ್ಲಿ ಕಟ್ಟಿಕೊಡುತ್ತಿದ್ದಾರೆ.

ಗದ್ದೆಯಲ್ಲಿ ಕಳೆ ಕೀಳುವ ಸಂದರ್ಭದಲ್ಲಿ ಊರಿನ ಎಲ್ಲಾ ಹೆಂಗಸರು ಒಟ್ಟುಗೂಡಿ ಕೆಲಸವನ್ನು ಹಂಚಿಕೊಂಡು ಮಾಡುವ ಜಾನಪದ ಸಾಮರಸ್ಯದ ಕೃಷಿ ಚಟುವಟಿಕೆಯನ್ನು ಗ್ರಾಮೀಣ ಬದುಕಿನ ಬಹುತ್ವದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ವ್ಯಕ್ತಿಗೆ ವೃತ್ತಿಗನುಗುಣವಾಗಿ ಜ್ಞಾನ ತುಂಬಾ ಅವಶ್ಯಕವೆಂಬುದನ್ನು ಈ ಕೃತಿಯಲ್ಲಿ ಉದಾಹರಣೆಗಳ ಮೂಲಕ ನೋಡಬಹುದು. ಯಾವುದೇ ಸಾಂದ್ರ ಬೇಸಾಯದ ತಿಳುವಳಿಕೆ ಇಲ್ಲದ ಗ್ರಾಮಸೇವಕ ಶಂಕ್ರಪ್ಪ ತನ್ನ ಜೊತೆಗಾರ ಕುಳವಾಡಿ ಕರಿಯನಿಗೆ ಇರುವ ಚಿಕ್ಕ ಜಮೀನಿನಲ್ಲಿ ಸಾಂದ್ರ ಬೇಸಾಯದ ಬಗ್ಗೆ ಪ್ರಕಟಿಸಿದ್ದ ಚಿಕ್ಕ ಪುಸ್ತಕ ಓದಿಕೊಂಡು ಅದರ ಪ್ರಕಾರ ಕರಿಯನಿಗೆ ಸಲಹೆ ಸೂಚನೆಗಳನ್ನು ಕೊಟ್ಟು ಕರಿಯನ ಇಡೀ ಜಮೀನಿನ ಭತ್ತವನ್ನು ನಾಶ ಮಾಡುತ್ತಾನೆ. ಎಲ್ಲರೂ ಎಲ್ಲ ಕೆಲಸಗಳಲ್ಲಿ ಜ್ಞಾನಿಗಳಲ್ಲ. ಅವರ ಪೊಳ್ಳು ಜ್ಞಾನದಿಂದ ರೈತರ ಸಂಕಷ್ಟಕ್ಕೆ ಕಾರಣವಾಗಿರುವುದು ಸ್ಪಷ್ಟ. ಕೃಷಿ ಅಥವಾ ಯಾವುದೇ ಉದ್ಯೋಗವಿರಲಿ ಅದಕ್ಕೆ ಪುಸ್ತಕ ಜ್ಞಾನಕ್ಕಿಂತ ಮಸ್ತಕ ಜ್ಞಾನ, ಅನುಭವ ಜ್ಞಾನ ದೊಡ್ಡದು ಎಂಬುದು ಸಾಬೀತಾಗುತ್ತದೆ. ಎದು ತೇಜಸ್ವಿ ಕಂಡುಕೊಂಡ ಜ್ಞಾನದ ಸತ್ಯ.

ಭೈರಪ್ಪ, ಸುಬ್ಬಯ್ಯ, ಸೀಗೆಗೌಡ, ರಾಮಣ್ಣ, ಕಾಳೇಗೌಡ ಈ ಐದು ಜನರು ಯಾವ ತಪ್ಪು ಮಾಡದಿದ್ದರೂ ಪೊಲೀಸ್ ಪೇದೆ ನಾರಾಯಣನೊಂದಿಗೆ ಸ್ಟೇಷನ್ನಿಗೆ ಬರುತ್ತಾರೆ. ಅಲ್ಲಿದ್ದ ಇನ್ಸೆಕ್ಟರ್ ಅವರನ್ನು ವಿಚಾರಿಸಿದೆ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಆ ಐದು ಜನರನ್ನು ಅತ್ಯಂತ ದುರ್ವಾಸನೆಯುಕ್ತ ಲಾಕಪ್‌ನೊಳಗೆ ತಳ್ಳಿಸುತ್ತಾನೆ. ಅದು ಅವರು ಮಾಡಿದ ತಪ್ಪು, ಒಪ್ಪು ತೀರ್ಮಾನವಾಗದೆ ಅವರೆಲ್ಲರೂ ಜೈಲಿನಲ್ಲಿ ದಿನ

ಕಳೆಯುವಂತೆ ಮಾಡುತ್ತಾರೆ. "ಬಡವರಾದರು ಮರ್ಯಾದೆಯಿಂದ ಕಾಲ ಹಾಕಿದ್ದ ಕಿರುಗೂರಿನ ಈ ಐವರು ಸಬ್ ಗೃಹಸ್ಥರಿಗೆ ಬರೀ ಲಂಗೋಟಿಯಲ್ಲಿ ಲಾಕಪ್ಪಿನ ಒಳಗೆ ಕೂರಬೇಕಾದಾಗ ಕಣ್ಣಲ್ಲಿ ನೀರು ಬಂತು. ಇಷ್ಟಾದರೂ ಅವರಿಗೆ ತಾವು ಮಾಡಿದ ಮಹಾ ಅಪರಾಧವಾದರೂ ಏನೆಂದು ತಿಳಿಯದೆ ತಮ್ಮ ಪೂರ್ವೋತ್ತರಗಳನ್ನು ಪರ್ಯಾಯಲೋಚಿಸುತ್ತಿದ್ದರು."[4] ಇಂತಹ ಅನೇಕ ಸಂಗತಿಗಳು ದಿನನಿತ್ಯ ಸಮಾಜದಲ್ಲಿ ನಡೆಯುತ್ತವೆ. ಕಾಯುವ ಆರಕ್ಷಕರೇ ಸಾಮಾನ್ಯ ಜನರೊಂದಿಗೆ ಹೇಗೆಲ್ಲ ವರ್ತಿಸುತ್ತಾರೆ, ಅವರು ತಮ್ಮ ಅಧಿಕಾರದ ಅಹಂನಿಂದ ಬಡಪಾಯಿ ಮುಗ್ಧ ಹಳ್ಳಿಗರನ್ನು ಹೇಗೆ ಹಿಂಸಿಸಿ ನರಕ ದರ್ಶನವನ್ನು ಮಾಡಿಸುತ್ತಾರೆ. ಪೊಲೀಸರು ತಮಗಿರುವ ಕಾನೂನಾತ್ಮಕ ಅಧಿಕಾರವನ್ನು ಬಳಸಿ ಹಳ್ಳಿಯ ಮುಗ್ಧ ಜನರನ್ನು ಹೆದರಿಸುತ್ತಾ ಅಧಿಕಾರವನ್ನು ಭಯ ಹುಟ್ಟಿಸುವ ಸಾಧನವನ್ನಾಗಿ ಉಪಯೋಗಿಸುತ್ತಿದ್ದಾರೆ. ಇದು ಸಮುದಾಯದ ಸಾಮಾಜಿಕ ಬದುಕಿಗೆ ಅಪಾಯಕಾರಿಯಾಗಿದೆ. ಕಾಪಾಡಬೇಕಾದವರೇ ಕೊಲ್ಲುವ ಹಾಗೆ ಅಧಿಕಾರ ಕೆಟ್ಟವರ ಕೈಗೆ ಸಿಕ್ಕಿ ದುರುಪಯೋಗವಾಗುತ್ತಿದೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

ಪೊಲೀಸ್ ವ್ಯವಸ್ಥೆ, ಸರ್ಕಾರಿ ಅಧಿಕಾರಿಗಳು ಮತ್ತು ಹಳ್ಳಿಯ ಪಂಚಾಯಿತಿ ಹಾಗೂ ಜನರ ಒಕ್ಕೂಟದ ನಡುವಿನ ಸಂಘರ್ಷ ಇಲ್ಲಿ ಎದ್ದು ಕಾಣುತ್ತದೆ. ಪೊಲೀಸರ ಭ್ರಷ್ಟಾಚಾರ ಹಾಗೂ ಅಧಿಕಾರದ ದರ್ಪವನ್ನು ಹಳ್ಳಿಯ ಸಾಮಾನ್ಯ ಹೆಂಗಸರು ತಮ್ಮದೇ ರೀತಿಯಲ್ಲಿ ಎದುರಿಸುವ, ಶ್ರೇಣಿಕೃತ ಅಧಿಕಾರ ವ್ಯವಸ್ಥೆಗೆ ಜನಸಾಮಾನ್ಯರು ನೀಡುವ ಪ್ರತ್ಯುತ್ತರದಂತಿದೆ. ಕಿರಗೂರಿನ ಹೆಂಗಸರು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗದೆ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಮತ್ತು ತಿದ್ದುವ ಶಕ್ತಿಯಾಗಿ ಹೊರಹೊಮ್ಮುತ್ತಾರೆ. ವೈವಿಧ್ಯಮಯ ಸ್ವಭಾವದ ಜನರು ಒಂದೇ ಕಡೆ ಒಂದೇ ಹಳ್ಳಿಯಲ್ಲಿ ವಾಸ ಮಾಡುವಾಗ ಉಂಟಾಗುವ ಘರ್ಷಣೆಗಳು ಅಂತಿಮವಾಗಿ ಒಂದು ಸಾಮಾಜಿಕ ಒಗ್ಗಟ್ಟಿಗೆ ಕಾರಣವಾಗುವುದು ಬಹುತ್ವದ ವಿಶೇಷ, ಅದನ್ನು ತೇಜಸ್ವಿಯವರ ಗಯ್ಯಾಳಿಗಳು ಕಥೆಯಲ್ಲಿ ಗುರುತಿಸಬಹುದಾಗಿದೆ.

ತೇಜಸ್ವಿ ಅವರ ದೃಷ್ಟಿ ಯಾವಾಗಲೂ ಜಾತ್ಯತೀತ ಮತ್ತು ಮಾನವೀಯ ನೆಲೆಯಿಂದ ಕೂಡಿರುವಂಥದ್ದು. ಇವರ ಕಥೆ ಕಾದಂಬರಿಗಳಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಭೇದ ಭಾವಗಳಿಲ್ಲದೆ ಎಲ್ಲರೂ ನಿಸರ್ಗದ ಮಡಿಲಲ್ಲಿ ಒಂದಾಗುತ್ತಾರೆ. ಸಮಾಜದ ಕಟ್ಟ ಕಡೆಯ ಜನರ ನಲಿವುಗಳಿಗೂ ಮಿಡಿಯುತ್ತಾರೆ. ಬೇರೆಯವರ ನೋವನ್ನು ತಮ್ಮ ನೋವೆಂದೇ ಭಾವಿಸುತ್ತಾರೆ.

ಕಿರಗೂರು ವಿವಿಧ ಜಾತಿಗಳ ಸಮೂಹವಿರುವ ಹಳ್ಳಿ ಇಲ್ಲಿ ಮೇಲ್ಜಾತಿ ಮತ್ತು ಕೆಳ ಜಾತಿಗಳ ನಡುವೆ ಸಂಘರ್ಷವಿದೆ. ಆದರೆ ಹಳ್ಳಿಗೆ ಹೊರಗಿನಿಂದ ಅಪಾಯ ಬಂದಾಗ ಜಾತಿಭೇದವನ್ನು ಮರೆತು ಎಲ್ಲರೂ ಒಂದಾಗುತ್ತಾರೆ. ಇದು ಭಾರತದಲ್ಲಿನ ಗ್ರಾಮೀಣ ಬದುಕಿನ ಸೌಹಾರ್ದತೆಯನ್ನು ಎತ್ತಿ ತೋರಿಸುತ್ತದೆ. ತೇಜಸ್ವಿಯವರ ಪ್ರಕೃತಿಯನ್ನು ಮನುಷ್ಯ ಕಣ್ಣಿಂದ ನೋಡದೆ ನಿಸರ್ಗ ಕೇಂದ್ರಿತ ಚಿಂತನೆಯಿಂದ ನೋಡಿದಾಗ ಪ್ರತಿಯೊಂದು ಸಮಾಜವು ಜೀವ ಪ್ರಕೃತಿಯ ಸಹಬಾಳ್ವೆಯ ಬಹುತ್ವವನ್ನು ಪ್ರತಿಪಾದಿಸುವಂತಹದ್ದಾಗಿದೆ.

ಕಿರುಗೂರಿನ ಗಂಡಸರು ಹೆಂಡತಿಯರ ಮೇಲೆ ದರ್ಪ ತೋರುವ ಜೊತೆಗೆ ಕೆಟ್ಟ ಚಟಗಳಿಂದ ಕಾಲ ಕಳೆಯುವ ಇವರು ತಮ್ಮ ಪುರುಷ ಅಹಂಕಾರವನ್ನು ಹಳ್ಳಿಯ ಅಭಿವೃದ್ಧಿಗಾಗಿ ಕುಟುಂಬದ ಹಿತಕ್ಕಾಗಲಿ ಬಳಸದೆ ಕೇವಲ ತಮ್ಮ ಪೌರುಷವನ್ನು ತೋರಿಸಲು ಬಳಸುತ್ತಾರೆ, ಇದು ಅಧಿಕಾರದ ನಿಷ್ಕ್ರಿಯ ರೂಪವಾಗಿದೆ.

ಈ ಕಥೆಯಲ್ಲಿ ಸಾಮಾಜಿಕ ನಡವಳಿಕೆ ಹಾಗೂ ಲಿಂಗ ತಾರತಮ್ಯದ ರೂಪದಲ್ಲಿ ಮೂಲಭೂತವಾದ ವ್ಯಕ್ತಗೊಂಡಿದೆ. ಒಂದು ವಿಷಯವನ್ನು ಕುರುಡಾಗಿ ಹಿಂಬಾಲಿಸುವ ಜಡತ್ವವೇ ಮೂಲಭೂತವಾದ. ಕಿರಗೂರಿನ ಪುರುಷರು ಮತ್ತು ಪಂಚಾಯಿತಿಯ ದೃಷ್ಟಿಯಲ್ಲಿ ಹೆಣ್ಣು ಎಂದರೆ ಹೀಗೆ ಇರಬೇಕು ಎಂಬ ಅಲಿಖಿತ ನಿಯಮಗಳನ್ನು ಪಾಲಿಸುತ್ತಾರೆ. ಗಂಡಸರು ಎಷ್ಟೇ ಚಟಗಳಿಗೆ ಬಲಿಯಾಗಿ ಹಾಳಾಗಿದ್ದರು ಅವರು ಪ್ರಶ್ನಾತೀತರು. ಆದರೆ ಹೆಣ್ಣು ಗಂಡನಿಗೆ ಅಡಿಯಾಳಾಗಿ ಸಮಾಜದ ಎಲ್ಲ ಕಟ್ಟುಪಾಡುಗಳನ್ನು ಮೀರದೆ ತನಗೆ ಅನ್ಯಾಯವಾದರೂ ಸಹ ಸುಮ್ಮನೆ ಸಹಿಸಿಕೊಂಡಿರಬೇಕು ಎಂಬ ಹಳೆಯ ನಂಬಿಕೆಯನ್ನು ಬಿಟ್ಟುಕೊಡಲು ತಯಾರಿಲ್ಲದವರು. ಇದು ಯಜಮಾನ್ಯ ಸಂಸ್ಕೃತಿಯ ಮೂಲಭೂತವಾದಿತನ ಮನಸ್ಥಿತಿಯ ಸಂಕೇತ. ಈ ಎಲ್ಲವನ್ನು ಮೀರಿ ಮಹಿಳೆಯರು ಧ್ವನಿ ಎತ್ತಿದಾಗ ಅವರನ್ನು ಸಮಾಜ 'ಗಯ್ಯಾಳಿಗಳು' ಎಂಬ ಪಟ್ಟವನ್ನು ಕಟ್ಟುತ್ತದೆ.

ಇಂಥದ್ದೇ ಇನ್ನೊಂದು ಸನ್ನಿವೇಶ ಹೊಲೆಯರ ಕರಿಯನು ಉಳುಕು ತೆಗೆಯುವಾಗ ಆತ ಕಾಲಿನಲ್ಲಿ ಬೆನ್ನನ್ನು ತುಳಿದು ತೆಗೆಯಬೇಕು ಎಂಬುದನ್ನು ತಮಗೆ ಅವಮಾನಕರ ಎಂದು ಗುರುತಿಸುವ ಊರಿನ ಮೇಲ್ವರ್ಗದವರು ಜಾತಿ ವ್ಯವಸ್ಥೆಯ ಮೂಲಭೂತ ಪರಿಕಲ್ಪನೆಯನ್ನು ಮುಂದುವರಿಸುವ ಕೊಂಡಿಯವರಂತೆ ಕಾಣುತ್ತಾರೆ. ಜಾತಿ ವ್ಯವಸ್ಥೆ ಹೆಸರಿನಲ್ಲಿ ಜಾತಿಯನ್ನು ಮೀರದೆ ಅವರನ್ನು ಅಸ್ಪೃಶ್ಯರಂತೆ ಕಾಣುವುದು ವ್ಯವಸ್ಥಿತ ಮೂಲಭೂತವಾದ, ಕೊನೆಗೆ ಇದನ್ನು ಮೀರಿ ಕರಿಯನಿಂದ ಉಳುಕು ತೆಗೆಸುವ ತೇಜಸ್ವಿ ಬಹುತ್ವದ ಪರದೆಯೊಂದಿಗೆ ಜಾತ್ಯಾತೀತ ಸಮಾಜದ ನಿರ್ಮಾಣವನ್ನು ಜಾತಿ ವ್ಯವಸ್ಥೆಯನ್ನು ಬೆಸೆಯುವ ಕೊಂಡಿಯನ್ನು ಕಂಡುಕೊಂಡಿದ್ದಾರೆ.

ನಾಗಮ್ಮ ನಂಬೋದರಿ ಪಂಡಿತನೊಂದಿಗೆ ಓಡಿ ಹೋದ ಸುದ್ದಿ ಪುಕರಾಗಿ ಹರಡಿದಾಗ ಆಕೆಯ ಗಂಡನ ವರ್ತನೆಗಳು ಮೂಲಭೂತವಾದಿತನದಿಂದ ಕೂಡಿವೆ. ಹೆಣ್ಣು ಹೀಗೆ ಬದುಕಬೇಕು ಸಮಾಜದ ಪುರುಷನ ನೈತಿಕ ಮನೋ ನಿಯಮಗಳು ಮೂಲಭೂತವಾಗಿ ಕಂಡು ಬಂದರೆ, ಮಕ್ಕಳಾಗದೆ ಇದ್ದಾಗ ಅದನ್ನು ಹೆಣ್ಣಿಗೆ ಬಂಜೆ ಎನ್ನುವ ಪಟ್ಟ ಕಟ್ಟಿ ಪುರುಷ ತನ್ನ ದೌರ್ಬಲ್ಯವನ್ನು ಹೆಣ್ಣಿನ ಮೇಲೆ ಹೊರಿಸಿ ತನ್ನ ದೌರ್ಬಲ್ಯವನ್ನು ಮುಚ್ಚಿಟ್ಟುಕೊಳ್ಳುವ ಅದನ್ನು ಮೀರಿ ನಾಗಮ್ಮ ತನ್ನ ಸಹಜ ಬದುಕು ತಾಯ್ತನಕ್ಕಾಗಿ ಇನ್ನೊಬ್ಬನೊಂದಿಗೆ ಹೋಗಿ ಅದನ್ನು ಉಲ್ಲಂಘಿಸುವ ರೀತಿ ಇದನ್ನೇ ಸಮಾಜದಲ್ಲಿ ಸಣ್ಣಪುಟ್ಟ ಮೂಲಭೂತವಾದಿ ಆಲೋಚನೆಗಳು ದೊಡ್ಡ ಅಪಾಯವನ್ನು ತಂದೊಡ್ಡುವಂತಹ ಅಪಾಯದ ವಿರುದ್ಧದ ಆಲೋಚನೆಗಳನ್ನು ಮೆಟ್ಟಿನಿಂತು ಹೆಣ್ಣು ತನ್ನ ತನದ ಅಸ್ತಿತ್ವವನ್ನು ಹಾಗೂ ವಿವಿಧ ಜಾತಿ ವರ್ಗಗಳ ನಡುವಿನ ಸಾಮರಸ್ಯವನ್ನು ಕಿರುಗೂರಿನ ಗಯ್ಯಾಳಿ ಕಥೆಯಲ್ಲಿ ತೇಜಸ್ವಿ ಅವರು ತೋರಿಸಿಕೊಟ್ಟಿದ್ದಾರೆ.

ಈ ಕಥೆಯಲ್ಲಿ ಜ್ಞಾನದ ಪರಿಕಲ್ಪನೆ ಅತ್ಯಂತ ಕುತೂಹಲಕಾರಿ ಇಲ್ಲಿ ಜ್ಞಾನ ಎಂದರೆ ಕೇವಲ ಅಕ್ಷರ ಜ್ಞಾನ, ಪದವಿ ಜ್ಞಾನವಲ್ಲ. ಬದಲಿಗೆ ಅನುಭವದೊಂದಿಗೆ ಗಳಿಸಿಕೊಂಡ ಲೋಕಜ್ಞಾನ. ಇಲ್ಲಿನ ಗಯ್ಯಾಳಿಗಳು ಯಾವುದೇ ಕಾನೂನು ಪುಸ್ತಕವನ್ನು ಓದಿದ ಅನುಭವವಿಲ್ಲದಿದ್ದರೂ ಸಮಾಜದ ಓರೆ ಕೋರೆಗಳನ್ನು ಹೇಗೆ ತಿದ್ದಬೇಕು ಎಂಬ ಜ್ಞಾನವಿದೆ. ಯಾವುದನ್ನು ಎದುರಿಸಬೇಕು, ಯಾವುದನ್ನು ಪ್ರತಿಭಟಿಸಬೇಕು ಎಂಬ ಪ್ರತಿಭಟನಾತ್ಮಕ ಜ್ಞಾನ ಇದೆ. ಅದಕ್ಕೆ ಪುರುಷ ಪ್ರಾಧಾನ್ಯತೆಯನ್ನು ಪ್ರತಿಭಟಿಸಿ ತಮ್ಮ ಕಿರಗೂರಿಗೆ ಬಂದು ಒದಗಬಹುದಾದ ಸಂಕಷ್ಟಗಳನ್ನು ಎದುರಿಸಿ ಮೆಟ್ಟಿ ನಿಲ್ಲುತ್ತಾರೆ.

ಇಂತಹ ಬೇರೆ ಬೇರೆ ಜ್ಞಾನಕ್ಕೆ ಹೊಲೆಯರ ಉಳುಕು ತೆಗೆಯುವ ಕರಿಯಪ್ಪ ಮಾದರಿಯಾಗಿದ್ದಾನೆ. ಯಾವುದೇ ಎಂ.ಬಿ.ಬಿ.ಎಸ್ ಓದಿ ಪದವಿಗಳಿಸದಿದ್ದರೂ ಆತನಲ್ಲಿ ಉಳುಕು ತೆಗೆಯುವ ಜ್ಞಾನವಿದೆ. ತನ್ನ ಊರಿನ ಜನರಿಗೆ ತೊಂದರೆಯಾದಾಗ, ನರ ಹಿಡಿದಾಗ ಉಳುಕು ತೆಗೆದು ಅವರ ಕಾಯಿಲೆಗಳನ್ನು ಗುಣಪಡಿಸುತ್ತಾನೆ. ನಗರ ಪ್ರದೇಶದ ಯಾವುದೇ ಆಸ್ಪತ್ರೆಗಳಲ್ಲಿ ಎಷ್ಟೇ ಔಷಧಿ ತಂದು ಹಚ್ಚಿದರೂ ವಾಸಿಯಾಗದ ಉಳುಕು ಸಾಮಾನ್ಯ ಹೊಲೆಯರ ಕರಿಯನಿಂದ ಗುಣವಾದದ್ದು ಆತನ ಅನುಭವ, ನಾಟಿ ವೈದ್ಯದ ಜ್ಞಾನಕ್ಕೆ ಹಿಡಿದ ಕನ್ನಡಿಯಾಗಿದೆ. ಇಂತಹ ಎಷ್ಟೋ ಜನರು ನಾಟಿ ವೈದ್ಯ ಪದ್ಧತಿಯನ್ನು ರೂಡಿಸಿಕೊಂಡು ಇಂದಿಗೂ ಗ್ರಾಮ ಮಟ್ಟದಲ್ಲಿ ಅನೇಕ ಕಾಯಿಲೆಗಳನ್ನು ಗುಣಪಡಿಸುತ್ತಿದ್ದಾರೆ. ಇದು ಗ್ರಾಮೀಣ ಪ್ರದೇಶದ ಜನರ ಅಸ್ಮಿತೆಯಾಗಿ ಕಾಣುತ್ತದೆ.

"ಕುವೆಂಪುರವರ ಪಾಲಿಗೆ ಕಾನನ ಬರೀ ಕಾಡಲ್ಲ, ಅದೊಂದು ಚೇತನ ಮತ್ತು ಸ್ಫೂರ್ತಿಯ ವಾಸಸ್ಥಾನ. ಹಾರುವ ಹಕ್ಕಿಯ ಸಾಲು ದೇವರು ರುಜು ಮಾಡಿದಂತೆ ದಿವ್ಯವಾಗಿ, ಭವ್ಯವಾಗಿ ಕಾಣುವ ಕುವೆಂಪು, ಮಲೆನಾಡಿನ ದಟ್ಟ ಅರಣ್ಯ, ಕುವೆಂಪು ನೆಲೆಯಲ್ಲಿ ವಿಶ್ವದ ಕೇಂದ್ರ ಸೃಷ್ಟಿ ಪ್ರಜ್ಞೆಯ ರೂಪಕ. ಇದು ತೇಜಸ್ವಿ ಅವರಲ್ಲಿ ವಿಭಿನ್ನ. ಇವರದು ಭಾವ ಪ್ರಧಾನ ಸೃಜನಶೀಲತೆಗಿಂತ ಬುದ್ಧಿಪ್ರದಾನ ಗ್ರಹಿಕೆಗೆ ಹಾಗು ಅದನ್ನು ಅಭಿವ್ಯಕ್ತಿಸುವ ಸೃಜನಶೀಲ ಭಿನ್ನವಾದ ಬದುಕಿಗೆ ಪರಿಸರವನ್ನು ನಿಗೂಢವಾಗಿ, ಗಾಢವಾಗಿ ಆಲಂಗಿಸಿದವರು ತೇಜಸ್ವಿ ಅನುಸಂಧಾನದಲ್ಲಿ ಬದುಕನ್ನು ಆವರಿಸಿಕೊಂಡು."[5]

ತೇಜಸ್ವಿ ನಿಸರ್ಗದ ಒಡಲಿನಲ್ಲಿರುವ ನಿಗೂಢ ಸಂಗತಿಗಳನ್ನು ಪ್ರಕೃತಿಯಲ್ಲಿನ ವಿಕಾಸವಾದದ ರಹಸ್ಯಗಳನ್ನು ಗ್ರಾಮೀಣ ಭಾರತದ ರೈತಾಪಿ ವರ್ಗದ ಸಮಸ್ಯೆಗಳನ್ನು, ಮಲೆನಾಡಿನ ಜನರ ಅಭಿವ್ಯಕ್ತಿ ಅಸಮಾನತೆಗಳನ್ನು ಜೊತೆಗೆ ಸಾಂಸ್ಕೃತಿಕ ಭಿನ್ನತೆಯ ಚಿತ್ರಣವನ್ನು ಹೊಸ ಆಲೋಚನೆಯ ಮೂಲಕ ಸರಳವಾದ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವ ಹೊಸ ಆಲೋಚನೆಯ ಮೂಲಕ ಸರಳವಾದ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವ ಕಲೆಗಾರಿಕೆಯನ್ನು ಅಭಿವೃದ್ಧಿಸಿಕೊಂಡವರು. ಕುವೆಂಪುರವರ ನಿಸರ್ಗ ಆರಾಧನೆ ದೃಷ್ಟಿಯಿಂದ ಹೊರಬಂದು, ವೈವಿಧ್ಯಮಯ ಪ್ರಕೃತಿಯ ವಿಸ್ಮಯಗಳನ್ನು ಪರಿಸರದೊಂದಿಗೆ ದೈನಂದಿನ ಬದುಕಿನಲ್ಲಿ ಕಂಡುಕೊಂಡವರು ತೇಜಸ್ವಿ.

ಕಿರಗೂರಿನ ಗಯ್ಯಾಳಿಗಳು ಈ ಕಥೆಯಲ್ಲಿ ಹೆಣ್ಣು ಮಕ್ಕಳು ಪಂಚಾಯತಿಯ ವಿರುದ್ಧ ತಿರುಗಿ ಬೀಳುವುದು ವ್ಯವಸ್ಥೆಯ ರಾಜಕೀಯ ನಾಟಕಗಳನ್ನು ಪ್ರತಿಭಟಿಸುವುದು ಮಹಿಳಾ ಅಭಿವ್ಯಕ್ತಿಯ ನೆಲೆಗಳಾಗಿ ಕಂಡುಬರುತ್ತದೆ. ಇವರು ಪುರುಷರನ್ನು ಹಾಗೂ ಯಜಮಾನ್ಯ ವ್ಯವಸ್ಥೆಯನ್ನು ಗ್ರಹಿಸುವುದು ವಿಭಿನ್ನ. ಯಜಮಾನಿಕೆಯ ನೆಪದಲ್ಲಿ ವ್ಯವಸ್ಥೆಯನ್ನು ತಮ್ಮ ಅಧೀನ ಮಾಡಿಕೊಳ್ಳಲು ಹೊದ ಗಂಡಸರು ಅವರ ದೌರ್ಬಲ್ಯ ನೋಡಿ ದಾನಮ್ಮನಲ್ಲಿದ್ದಂತಹ ಶಕ್ತಿ ಎಲ್ಲರಿಗೂ ಹರಿಯುತ್ತದೆ.

ತೇಜಸ್ವಿ ಬಳಸುವ ಭಾಷೆ ಸಜೀವವಾದುದು, ಅಲ್ಲಿ ಗ್ರಾಮೀಣ ಸೊಗಡು ಮಲೆನಾಡಿನ ಉಪಭಾಷೆ ಮತ್ತು ವೈಜ್ಞಾನಿಕ ಪಾರಿಭಾಷಕ ಪದಗಳನ್ನು ಹದವಾಗಿ ಪಾತ್ರ ಸನ್ನಿವೇಶಗಳ ಮೂಲಕ ಬಳಸಿದ್ದಾರೆ. ಅವರ ಕಥನ ಸಾಹಿತ್ಯ ಶಿಷ್ಟ ಭಾಷೆಗೆ ಸೀಮಿತವಾಗದೆ ಜನಸಾಮಾನ್ಯರ ಗ್ರಾಮೀಣ ಜನರ ಆಡುಭಾಷೆಯನ್ನು ಬಳಸಿದ್ದಾರೆ.

ಒಟ್ಟಾರೆಯಾಗಿ ತೆಜಸ್ವಿಯವರ ಕಿರಗೂರಿನ ಗಯ್ಯಾಳಿಗಳು ಕಥೆಯು ಭಾರತೀಯ ಪರಂಪರೆಯಲ್ಲಿ ಬೇರೂರಿರುವ ಜಾತಿ, ವರ್ಣ, ವರ್ಗ, ರಾಜಕೀಯ, ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಮರು ಚಿಂತನೆಗೆ ಒಳಪಡಿಸುವ, ಈ ನೆಲದ ಗ್ರಾಮೀಣ ಸೊಗಡಿನ ಅಸ್ಮಿತೆಗಳನ್ನು, ಸ್ತ್ರೀ ಸಂಘಟನೆಯ ಶಕ್ತಿಯನ್ನು ಮಾತ್ರವಲ್ಲದೆ ಸೌಹಾರ್ದತೆಯ ನೆಲೆಗಳನ್ನು ಬಿಚ್ಚಿಡುವ ಹಾಗೂ ಪರಿಸರದ ಬಗೆಗಿನ ಮನುಷ್ಯನ ಪರಿಕಲ್ಪನೆಗಳನ್ನು ಮರುಚಿಂತನೆಗೊಳಪಡಿಸುವ ಅತ್ಯುತ್ತಮ ಕೃತಿಯಾಗಿದೆ.

ಕೊನೇ ಟಿಪ್ಪಣಿಗಳು:

1) ಪೂಚಂತೇ : ಕಿರಗೂರಿನ ಗಯ್ಯಾಳಿಗಳು, ಪುಟ ಸಂ 01. ಪುಸ್ತಕ ಪ್ರಕಾಶನ 1991.
2) ಅದೇ ಪುಟ ಸಂ 06
3) ಅದೇ ಪುಟ ಸಂ 25
4) ಅದೇ ಪುಟ ಸಂ 17
5) ಡಾ. ಜಲಜಾಕ್ಷಿ ಸಿ : ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಆಧುನಿಕತೆ, ಪು ಸಂ 85–86, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, 2020.

ಪರಾಮರ್ಶನ ಗ್ರಂಥಗಳು:

1) ಪೂಚಂತೇ : ಕಿರಗೂರಿನ ಗಯ್ಯಾಳಿಗಳು.
2) ಡಾ. ಜಲಜಾಕ್ಷಿ ಸಿ :ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಆಧುನಿಕತೆ.